**CCE RF**
**CCE RR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2017**

**S. S. L. C. EXAMINATION, MARCH / APRIL, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 10. 04. 2017 ] **ಸಂಕೇತ ಸಂಖ್ಯೆ : 62-K**

Date : 10. 04. 2017 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ + ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh + Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 10 × 1 = 10 |
| 1. | ಗೊರೂರರು ಅಮೆರಿಕಾಕ್ಕೆ ಹೋಗಿದ್ದಾಗ ತಮ್ಮ ಸಮಸ್ಯೆಯನ್ನು ಮಿನಿ ಪೊಲೀಸ್‌ನಗರದ ಒಬ್ಬ ಟ್ರಾಫಿಕ್ ಪೊಲೀಸ್‌ನವನ ಹತ್ತಿರ ಹೇಳಿಕೊಂಡರು. | |
| 2. | ಪೊಲೀಸನ ಮನೆಯಲ್ಲಿ ಗೊರೂರರವರಿಗೆ ರಾತ್ರಿ ಊಟಕ್ಕೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್‌ಗಳು ದೊರೆತವು. | |
| 3. | ಕನ್ನಡಿಗರ ಭಾಷಾ ಸಾಮರಸ್ಯ ಗುಣ, ಅನ್ಯಭಾಷಾ ಸಾಹಿತ್ಯಗಳನ್ನು ಸಕ್ರಿಯವಾಗಿ ಪುರಸ್ಕರಿಸುತ್ತಿರುವ ಮಾರ್ಗ ಅನುಕರಣೀಯವಾದುದೆಂದು ರಾಜರತ್ನಂ ಹೇಳಿದ್ದಾರೆ. | |
| 4. | ಅಕ್ಕಿ, ಮೆಣಸಿನ ಕಾಳು ಮತ್ತು ನೇಕಾರರು ನೇಯ್ದ ಬಟ್ಟೆಗಳ ವ್ಯಾಪಾರಕ್ಕಾಗಿ ಪೋರ್ಚುಗೀಸರು ಭಾರತಕ್ಕೆ ಬಂದರು. | |
| 5. | ನಾ. ಕಸ್ತೂರಿಯವರದು ಲಲಿತ ಪ್ರಬಂಧಗಳ ಮತ್ತು ಸ್ವಚ್ಛಂದ ಹರಟೆಗಳ ಕ್ಷೇತ್ರಗಳಲ್ಲಿ ಮರೆಯಲಾರದ ಹೆಸರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ಹಿಂದೂ, ಕ್ರೈಸ್ತ, ಮುಸಲ್ಮಾನರಾದ ನಾವು, ನೀವು, ಅವರು, ಇವರು ಎಲ್ಲರೂ ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್‌ರವರು ಹೇಳಿದ್ದಾರೆ. | |
| 7. | ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಹೊಸ ಮನುಷ್ಯರಾಗುತ್ತೇವೆ ಎಂದು ಬಿ.ಆರ್. ಲಕ್ಷ್ಮಣರಾವ್‌ರವರು ಹೇಳಿದ್ದಾರೆ. | |
| 8. | ಬಡತನಕ್ಕೆ ಉಣ್ಣುವ ಚಿಂತೆ ಕಾಡುವುದು ಎಂದು ಅಂಬಿಗರ ಚೌಡಯ್ಯನು ಹೇಳಿದ್ದಾನೆ. | |
| 9. | ಪುಲಿಗೆರೆ ಕವಿ ಸೋಮನು ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕೆಂದು ಹೇಳಿದ್ದಾನೆ. | |
| 10. | ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :** (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $10 \times 2 = 20$ |
| 11. | ಲೇಖಕರು ಅಮೆರಿಕಾದ ಮಿನಿಪೊಲೀಸ್ ನಗರದ ಸೌಂದರ್ಯವನ್ನು ನೋಡುತ್ತ ಮಿತ್ರರು ಅವರನ್ನು ಕರೆದುಕೊಂಡು ಹೋಗಲು ಗೊತ್ತುಪಡಿಸಿದ್ದ ಸ್ಥಳದಿಂದ ದಾರಿ ತಪ್ಪಿಸಿಕೊಂಡರು. ಜೇಬಿನಲ್ಲಿ ಎರಡು ಡಾಲರ್ ಹಣವಷ್ಟೇ ಇತ್ತು. ರಾತ್ರಿ ಒಂಬತ್ತು ಗಂಟೆಯಾದುದರಿಂದ ಶೀತ ಪ್ರಾರಂಭವಾಗಿತ್ತು. ಒಂದು ಶಾಲು ಮತ್ತು ಉಣ್ಣೆ ಜುಬ್ಬವಷ್ಟೇ ಅವರ ಹತ್ತಿರವಿತ್ತು. ಭಾರತದಂತೆ ಸಾರ್ವಜನಿಕ ಸ್ಥಳಗಳಲ್ಲಿ ಮಲಗಲು ಅವಕಾಶವಿರಲಿಲ್ಲ. | |
| 12. | ನೃಪತುಂಗ ಚಕ್ರವರ್ತಿಯು ಕನ್ನಡನಾಡಿಗೆ ಕೊಟ್ಟ ಅಷ್ಟಾದಶಾಕ್ಷರಿ ಮಂತ್ರದ ಅರ್ಥವನ್ನು ನಾವು ಪರಿಭಾವಿಸಬೇಕು. ಅದಕ್ಕೆ ತಕ್ಕ ಹಾಗೆ ನಮ್ಮ ನುಡಿವಳಿಯನ್ನು, ನಡೆವಳಿಯನ್ನು ಬೆಳೆಸಿಕೊಂಡರೆ ಕರ್ನಾಟಕ ರಾಜ್ಯ ಉದಯವಾದದ್ದು ಸಾರ್ಥಕವಾಗುತ್ತದೆ ಎಂದು ರಾಜರತ್ನಂ ಹೇಳುತ್ತಾರೆ. | |
| 13. | ಕುಲಕರ್ಣಿಯ ಪಿಸ್ತೂಲು ಮತ್ತು ರಾಮಸಿಂಗ್ ಹಿಡಿದಿದ್ದ ಧ್ವಜ. ಇವುಗಳಲ್ಲಿ ಧ್ವಜವೇ ಶ್ರೇಷ್ಠ. ಏಕೆಂದರೆ ಧ್ವಜವು ದೇಶಾಭಿಮಾನ, ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಸಂಕೇತವಾಗಿದೆ. ಆದರೆ ಪಿಸ್ತೂಲು ಸ್ವಾತಂತ್ರ್ಯದ ದಮನದ ಕ್ರೌರ್ಯದ ಸಂಕೇತವಾಗಿದೆ. | |
| 14. | ಪೋರ್ಚುಗೀಸರನ್ನು ಪಲಾಯನಗೈಯುವಂತೆ ಮಾಡಿದ ರಾಣಿಯನ್ನು ನೋಡಿ ಜಿನೋವಾ ಪಿತ್ರೋ ಸಂತೋಷದಿಂದ "ವಿಶ್ವವಿಖ್ಯಾತರಾದ ನಿಮ್ಮನ್ನು ನೋಡಲು ಅಷ್ಟು ದೂರದಿಂದ ಬಂದದ್ದು ಸಾರ್ಥಕವಾಯಿತು" ಎಂದು ಹೇಳಿದನು. ಯಾವುದೇ ರೀತಿಯ ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿ ರಾಣಿ ಅಬ್ಬಕ್ಕದೇವಿಯು ವಿವೇಚನಾಶೀಲಳೂ, ನ್ಯಾಯಪರಳೂ, ಕುಶಲಳೂ ಆಗಿದ್ದಾಳೆ ಎಂದು ಹೇಳಿದನು. | |
| 15. | ಔರಂಗಜೇಬನು ತನ್ನ ಮಗ ಅಜಮತಾರನ ಜೊತೆಗೆ ಭಾರಿ ಸೈನ್ಯವನ್ನು ಕಳುಹಿಸಿದಾಗ ಚಾಣಾಕ್ಷಳಾದ ಚೆನ್ನಮ್ಮಾಜಿ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು. ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟು ದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಘಲ್ ಸೇನೆಗೆ ಅನ್ನ ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣಭೀತಿಯಿಂದ ಮೊಘಲರು ಪಲಾಯನಗೈಯುವಂತೆ ಮಾಡಿದಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಮಧುರ ಕಂಠದಿಂದ ಹಾಡುವುದು ಕೋಗಿಲೆಯ ಸ್ವಭಾವ. ಮೌನವಾಗಿರುವುದು ಅದಕ್ಕೆ ಭೂಷಣವಲ್ಲ. ಅದರ ಗಾನ ಮಾಧುರ್ಯದಿಂದ ರಸದ ಚಿಲುಮೆಯನ್ನು ಹರಿಸಿ, ಪ್ರೀತಿ ಎಂಬ ಅಮೃತವನ್ನು ಸದಾಕಾಲ ನೀಡಬೇಕೆಂದು ಕವಿ ಚೆನ್ನವೀರ ಕಣವಿಯವರು ಕೋಗಿಲೆಯನ್ನು ಕೋರಿದ್ದಾರೆ. | |
| 17. | ಕೋಗಿಲೆಯ ಮಧುರ ಕಂಠವನ್ನು ಕೇಳಿ ಕವಿಯ ಭಾವನೆಗಳೆಲ್ಲವೂ ಮೂಕವಾದವು. ಮನುಷ್ಯ ಲೋಕವೇ ದೇವತೆಗಳ ಸ್ವರ್ಗದಂತೆ ಭಾಸವಾಯಿತು. ಕವಿಯ ಹೃದಯವು ಈ ಕ್ಷಣದಲ್ಲಿ ತಾಳ ಹಿಡಿದು ಕುಣಿಯುವಷ್ಟು ಸಂತೋಷಪಡುತ್ತಿದ್ದವು. ವಿವಿಧ ರಾಗದ ನಾದದ ಲಯ ಸಂಗೀತ ವಾದ್ಯಗಳನ್ನು ನುಡಿಸಿದಾಗ ಮೂಡುವ ನಾದದ ಸಾಮರಸ್ಯದಂತೆ ಹೊರಹೊಮ್ಮಿ ಕವಿ ಮನಕ್ಕೆ ಮುದವನ್ನು ನೀಡುತ್ತಿದ್ದವು. | |
| 18. | ಭೂಮಿಯ ರಕ್ಷಕ ಮಳೆರಾಯ. ನೀನಿಲ್ಲದೆ ಭೂಮಿ ಸೊರಗಿ ಹೋಗಿದೆ. ದನಕರುಗಳ ಸ್ಥಿತಿ ಚಿಂತಾಜನಕವಾಗಿದೆ. ಪೂರ್ವ ದಿಕ್ಕಿನಲ್ಲಿ ಸುರಿಯುವ ಜಿನುಗು ಮಳೆಯೇ ಬೆಟ್ಟದ ಮೇಲಿರುವ ಭೈರವನೇ ಎದ್ದು ಬರುವಂತೆ ಅಧಿಕ ಮಳೆಯನ್ನು ಸುರಿಸು. ನೀನು ಕರುಣೆ ತೋರಿ ಬಾ ಎಂದು ಮಳೆದೇವರಲ್ಲಿ ರೈತರು ಪ್ರಾರ್ಥಿಸುತ್ತಾರೆ. | |
| 19. | ಮಳೆಯಿಲ್ಲದೆ ಬೇಸತ್ತ ರೈತರು ಪೂರ್ವದಿಕ್ಕಿನಲ್ಲಿ ಮೋಡ ಕಾಣಿಸಿಕೊಂಡಾಗ ಜನರನ್ನು ಕರೆಕರೆದು ಮೋಡದ ಚಂದವನ್ನು ತೋರಿಸಿ, ಮೋಡವು ಗೋಡೆಗೆ ಕಪ್ಪು ಬಳಿದ ಹಾಗೆ ಕಾಣಿಸುತ್ತಿದೆ. ಆಕಾಶದಲ್ಲಿ ಭೋರ್ಗರೆಯುತ್ತಿರುವ ಮಳೆಯ ಸೂಚನೆಯ ಶಬ್ದ ಕೇಳಿ ಬರುತ್ತಿದೆಯೆಂದು ರೈತರು ಮೋಡಗಳನ್ನು ನೋಡಿ ಸಂಭ್ರಮಿಸಿದರು. | |
| 20. | ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲೇ ಹಾದು ಹೋದಾಗ ಈರಪ್ಪ ಎಂ. ಕಂಬಳಿಯವರಿಗೆ ಮೈಮರೆತು ಕೂತಿದ್ದವರಿಗೆ ಸಾವೇ ಭುಜಸವರಿ ಹೋದಂತಾಯಿತು. ದಿಗ್ಗನೆ ಟಾಪಿಗೆ ಒರಗಿದರು. ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಯಿತು. | |
| | **ಸಂದರ್ಭಸಹಿತ ವಿವರಣೆ :** | 2 × 3 = 6 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 21. | *"ಹೆಣ್ಣು ಮಗಳೇ, ಆ ಧ್ವಜವನ್ನು ಮೊದಲು ಕೆಳಗಿಡು"*<br>ಈ ಮೇಲಿನ ವಾಕ್ಯವನ್ನು 'ಧ್ವಜ ರಕ್ಷಣೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪಾಠವನ್ನು ಪ್ರೊ॥ ಎಸ್.ಆರ್. ರೋಹಿಡೇಕರ್‌ರವರು ರಚಿಸಿದ 'ರಾಮಸಿಂಗ್ ಚೌಕ್' ಎಂಬ ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಕುಲಕರ್ಣಿ ತುಳಜಾಬಾಯಿಗೆ ಹೇಳಿದನು. ತನ್ನ ಮಗ ಸತ್ತಿರುವ ವಿಷಯವನ್ನು ತಿಳಿದ ತುಳಜಾಬಾಯಿ ಧ್ವಜ ಹಿಡಿದುಕೊಂಡು ಬಂದು ತನ್ನ ಮಗನ ಶವದ ಮೇಲೆ ಬಿದ್ದು ಪ್ರಲಾಪಿಸುತ್ತಿರುವ ಸಂದರ್ಭದಲ್ಲಿ ಹೇಳಿದ ಮಾತು.<br>ಹೆತ್ತ ಮಗನಿಗಿಂತಲೂ ತನಗೆ ತನ್ನ ದೇಶವೇ ಮುಖ್ಯ ಧ್ವಜವನ್ನು ಕೆಳಗಿಡಲಾರೆ ಎಂಬ ಭಾವನೆ ತುಳಜಾಬಾಯಿಯಲ್ಲಿ ಎದ್ದು ಕಾಣುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | "ಹೆಂಡಿರಾದರೆ ಮಕ್ಕಳ ಚಿಂತೆ'<br>ಈ ಮೇಲಿನ ವಾಕ್ಯವನ್ನು 'ವಚನ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಪದ್ಯವನ್ನು ಅಂಬಿಗರ ಚೌಡಯ್ಯನವರು ಬರೆದ 'ಗಮಕ ಗಂಗೋತ್ರಿ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.<br>ಅಂಬಿಗರ ಚೌಡಯ್ಯನು ಪ್ರಾಪಂಚಿಕ ಸುಖದಲ್ಲಿ ಮುಳುಗಿರುವವನ ಕುರಿತು ಈ ಮಾತನ್ನು ಹೇಳಿತ್ತಾನೆ. ಬಡತನದಲ್ಲಿರುವ ಮನುಷ್ಯನಿಗೆ ಉಣ್ಣುವ ಚಿಂತೆ, ನಂತರ ಉಡುವ ಚಿಂತೆ, ಅದಕ್ಕೆ ಪರಿಹಾರ ದೊರೆತ ನಂತರ ಸಂಪಾದಿಸಿ ಕೂಡಿಡುವ ಚಿಂತೆ, ನಂತರ ಹೆಂಡತಿಯ ಚಿಂತೆ ಹೀಗೆ ಒಂದಲ್ಲ ಒಂದು ಚಿಂತೆಯಲ್ಲಿ ಮನುಷ್ಯನು ಮುಳುಗಿರುತ್ತಾನೆ ಎಂದು ಹೇಳುವ ಸಂದರ್ಭ.<br>ಲೋಕದ ಜನರು ಶಿವ ಚಿಂತೆಯನ್ನು ಬಿಟ್ಟು ಬದುಕಿನ ಚಿಂತೆಯಲ್ಲಿ ಮುಳುಗಿರುವ ಪರಿಯನ್ನು ಇಲ್ಲಿ ವರ್ಣಿಸಲಾಗಿದೆ. | |
| 23. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ.<br>**ಅಥವಾ**<br>ಕರ್ನಾಟಕ ವಂಗ ಆಂಧ್ರ:<br>ಭಾರತೀಯರೊಂದೆ.<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ. | $1 \times 3 = 3$ |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 24 | *ಅ.ರಾ. ಮಿತ್ರ :*<br>ಅ.ರಾ. ಮಿತ್ರರವರು 1935 ರ ಫೆಬ್ರವರಿ 25 ರಂದು ಹಾಸನ ಜಿಲ್ಲೆಯ ಬೇಲೂರಿನಲ್ಲಿ ಜನಿಸಿದರು. ಇವರು ಖ್ಯಾತ ಸಾಹಿತಿ ಮತ್ತು ವಾಗ್ಮಿಗಳು. ಇವರು ಲಲಿತ ಪ್ರಬಂಧ, ಅರತಕ್ಷತೆ, ನಾನೇಕೆ ಕೊರೆಯುತ್ತೇನೆ, ಪ್ರೇಮ ನದಿಯ ದಡಗಳಲ್ಲಿ, ಒಳನೋಟಗಳು, ಸಮಗ್ರ ಪ್ರಬಂಧ ಸಂಕಲನ, ಛಂದೋ ಮಿತ್ರ, ಕುಮಾರವ್ಯಾಸ ಭಾರತ ಕಥಾ ಮಿತ್ರ, ಸ್ಮರಣೀಯರು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | *ಬಿ.ಆರ್. ಲಕ್ಷ್ಮಣರಾವ್ :*<br>ಇವರು 1946 ಸೆಪ್ಟೆಂಬರ್ 9 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ಜನಿಸಿದರು. ಇವರು ಗೋಪಿ ಮತ್ತು ಗಾಂಡಲೀನ, ಟುವಟಾರ, ಶಾಂಗ್ರಿ–ಲಾ, ಕ್ಯಾಮೆರಾ ಕಣ್ಣು, ಭಾರತ ಬಿಂದು ರಶ್ಮಿ, ಸುಬ್ಬಾಭಟ್ಟರ ಮಗಳೇ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.<br>**ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 26. | ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ ಅವರ ಸಾಧನೆ, ಸೇವೆಗಳನ್ನು ಪುರಸ್ಕರಿಸಿ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಅವರನ್ನು ಅಂಸಿ ಬಂದು ಅಲಂಕರಿಸಿವೆ. ಇವುಗಳಲ್ಲಿ 1995 ರಲ್ಲಿ ಭಾರತ ಸರ್ಕಾರದ ಅರ್ಜುನ ಪ್ರಶಸ್ತಿ, 1996 ರಲ್ಲಿ ಲಂಡನ್‌ನ ವಿಸ್ಡೆನ್ ವರ್ಷದ ಕ್ರಿಕೆಟರ್ ಪ್ರಶಸ್ತಿ. 2005 ರಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಗಳು ಲಭಿಸಿವೆ. ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯ ವೃತ್ತವೊಂದಕ್ಕೆ ಅನಿಲ್ ಕುಂಬ್ಳೆ ವೃತ್ತವೆಂದು ನಾಮಕರಣ ಮಾಡಲಾಗಿದೆ. 2012 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಅಧ್ಯಕ್ಷರಾಗಿ ನೇಮಕ. 2013 ರ ಜುಲೈ 6 ರಂದು ಮೈಸೂರು ವಿಶ್ವವಿದ್ಯಾನಿಲಯವು ತನ್ನ 93ನೇಯ ಘಟಕೋತ್ಸವದಲ್ಲಿ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.<br>**ಅಥವಾ**<br>ಕುಂಬ್ಳೆಯವರು 1990 ರಲ್ಲಿ ಭಾರತದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದರು. ಇವರು ಜಗತ್ತಿನ ಶ್ರೇಷ್ಠ ಸ್ಪಿನ್ ಬೌಲರ್‌ಗಳಲ್ಲಿ ಒಬ್ಬರು. 2007 ರಲ್ಲಿ ಭಾರತ ತಂಡದ ನಾಯಕರಾಗಿದ್ದರು. ಟೆಸ್ಟ್ ಮತ್ತು ಏಕ ದಿನದ ಕ್ರಿಕೆಟ್ ಪಂದ್ಯಗಳಲ್ಲಿ ಒಟ್ಟು 956 ವಿಕೆಟ್‌ಗಳನ್ನು ಪಡೆದು ಭಾರತದ ಅಗ್ರಮಾನ್ಯ ಬೌಲರ್ ಆಗಿದ್ದರು. 2002 ರಲ್ಲಿ ಇಂಗಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ 110 ರನ್‌ಗಳಿಸಿ ಭಾರತ ತಂಡವು ಹೆಚ್ಚು ರನ್‌ಗಳಿಸಲು ಸಹಯೋಗ ನೀಡಿದರು. ಕುಂಬ್ಳೆಯವರು ದೆಹಲಿಯ ಫಿರೋಜ್ ಷಾ ಕೋಟ್ಲ ಮೈದಾನದಲ್ಲಿ ಪಾಕಿಸ್ತಾನದ ಎದುರು ಒಂದೇ ಇನ್ನಿಂಗ್ಸ್‌ನ ಎಲ್ಲಾ ಹತ್ತು ವಿಕೆಟ್‌ಗಳನ್ನು ಪಡೆದು ವಿಶ್ವದಾಖಲೆ ನಿರ್ಮಿಸಿದರು. ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದು ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತೀ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರ್ ಎಂಬ ಹಿರಿಮೆ. ಮೂರನೆಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿ. ಕಲ್ಕತ್ತದಲ್ಲಿ ನಡೆದ ರಿಲಯನ್ಸ್ ಕಪ್ ಅಂತಿಮ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | 10 ಓವರ್‌ಗಳಲ್ಲಿ 13 ರನ್ ನೀಡಿ 6 ವಿಕೆಟ್ ಪಡೆದ ಅದ್ಭುತ ಸಾಧನೆ ಕುಂಬ್ಳೆಯವರದ್ದಾಗಿದೆ. ವೆಸ್ಟ್ ಇಂಡೀಸ್ ವೇಗದ ಬೌಲರ್ ಒಬ್ಬರ ಚೆಂಡು ಅವರ ದವಡೆಗೆ ಬಡಿದು ಗಾಯವಾಗಿದ್ದರೂ, ಚಿಕಿತ್ಸೆ ಪಡೆದು ಅಂಗಳಕ್ಕೆ ಇಳಿದು ಬ್ರಯಾನ್ ಲಾರಾ ಅವರ ವಿಕೆಟನ್ನು ಪಡೆದದ್ದು ಅವರ ಅದ್ವಿತೀಯ ಸಾಧನೆಯಾಗಿದೆ. | |
| 27. | ಮನುಷ್ಯರಾದ ನಾವು ಪ್ರತಿನಿತ್ಯವೂ ಮಾಡುವ ಪಾಪ ಪುಣ್ಯಗಳ ಲೆಕ್ಕವನ್ನು ಹಾಕಬೇಕು. ಒಳ್ಳೆಯ ಕೆಟ್ಟ ಕಾರ್ಯಗಳನ್ನು ಬೇರ್ಪಡಿಸುವುದರ ಮೂಲಕ ಮನಸ್ಸನ್ನು ದಿನವೂ ಶುದ್ಧಗೊಳಿಸಬೇಕು. ಧರ್ಮ ಮತ್ತು ಅಧರ್ಮಗಳನ್ನು ವಿಂಗಡಿಸಬೇಕು. ಅಧರ್ಮಕ್ಕೆ ಕಾರಣವಾದ ಅಂದರೆ ಕೆಟ್ಟ ಕೆಲಸಗಳಿಗೆ ಕಾರಣವಾಗಿರುವ ಅದರ ಮೂಲವನ್ನು ಕಂಡುಹಿಡಿದು ಬೇರು ಸಹಿತ ಕಿತ್ತೆಸೆಯಬೇಕು. ಶುದ್ಧ ನಡವಳಿಕೆಯಿಂದ ನಡೆಯಬೇಕು. ಮನಸ್ಸಿನ ಬಯಕೆಗಳನ್ನು ನಿಗ್ರಹಿಸಿಟ್ಟುಕೊಳ್ಳಬೇಕು. ನಿನ್ನನ್ನು ನೀನು ಅರ್ಥೈಸಿಕೊಂಡು ಬದುಕನ್ನು ಸಾಗಿಸಬೇಕು. ಜೀವನದಲ್ಲಿ ತನು–ಮನವನ್ನು ದಂಡಿಸಿಕೊಂಡು ಉತ್ತಮ ಜೀವನ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಪರಮಾತ್ಮನ ಪಾದ ಕಮಲವನ್ನು ಸದಾ ಭಜಿಸಬೇಕೆಂದು ಪುರಂದರದಾಸರು ಹೇಳಿದ್ದಾರೆ.<br><br>***ಅಥವಾ***<br><br>ಪುರಂದರದಾಸರು ಜಗತ್ತನ್ನು ಬದಲಿಸಿ ಜನರಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ಬೆಳೆಸಲು ಪ್ರಯತ್ನಿಸುವುದರ ಜೊತೆಗೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಶುದ್ಧಿಯನ್ನು ತರಲು ಪ್ರಯತ್ನಿಸಿದರು.<br><br>ಪ್ರತಿನಿತ್ಯವೂ ನಾವು ಮಾಡುವ ಕೆಲಸ ಕಾರ್ಯಗಳಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದನ್ನು ಲೆಕ್ಕಾಚಾರ ಮಾಡಿ ಕೆಟ್ಟದ್ದನ್ನು ಬೇರ್ಪಡಿಸಬೇಕು. ಒಳ್ಳೆಯ ಕೆಟ್ಟ ನಡತೆಗಳನ್ನು ವಿಂಗಡಿಸಿ. ಕೆಟ್ಟ ನಡತೆಗೆ ಕಾರಣವಾದ ವಿಷಯಗಳನ್ನು, ಮೂಲಗಳನ್ನು ಕಂಡುಹಿಡಿದು ಅದನ್ನು ಬೇರು ಸಹಿತ ಕಿತ್ತೆಸೆಯಬೇಕು. ಶುದ್ಧ ನಡವಳಿಕೆಯಿಂದ ನಡೆಯಬೇಕು. ಶರೀರದ ಆಸೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಮನಸ್ಸಿನ ಬಯಕೆಗಳನ್ನು ನಿಗ್ರಹಿಸಿಟ್ಟುಕೊಂಡು ನಮ್ಮಲ್ಲಿ ನಾವು ಪರಮಾತ್ಮನನ್ನು ಕಾಣುವ ಪ್ರಯತ್ನವನ್ನು ಮಾಡಿದಾಗ ಮುಕ್ತಿಯೆಂಬುದು ಕೇವಲ ಒಂದು ಗೇಣು ದೂರದಷ್ಟು ಹತ್ತಿರವಾಗುತ್ತದೆ. ಪರಮಾತ್ಮನನ್ನು ನಂಬಿದ ಭಕ್ತರಿಗೆ ಯಾವತ್ತೂ ಕೇಡಾಗದು. ಕೆಟ್ಟವರ ಸಂಗವನ್ನು ಅವನು ಎಂದೂ ಮಾಡುವುದಿಲ್ಲ. ಅವನ ಪಾದ ಕಮಲವನ್ನು ಭಜಿಸಿ ಮುಕ್ತಿಯನ್ನು ಪಡೆಯಿರಿ ಎಂದು ಪುರಂದರದಾಸರು ದಾಸರ ಪದದಲ್ಲಿ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 28. | (ಸಿ) ಐದು | |
| 29. | (ಎ) ವಿದ್ಯಾಧರ | |
| 30. | (ಡಿ) ಉಪಮಾ | |
| 31. | (ಬಿ) ಪ್ರಶ್ನಾರ್ಥಕ | |
| 32. | (ಸಿ) ಜೋಡುನುಡಿ | |
| 33. | (ಡಿ) ಸ್ವದೇಶ | |
| 34. | (ಎ) ಕ್ರಿಯಾ | |
| 35. | (ಬಿ) ಸವರ್ಣದೀರ್ಘ ಸಂಧಿ | |
| 36. | (ಸಿ) ಆಶ್ಚರ್ಯ | |
| 37. | (ಡಿ) ಸಂಯೋಜಿತ ವಾಕ್ಯ | |
| 38. | (ಸಿ) ರಾಮಸಿಂಗನು | |
| 39. | (ಬಿ) ಸರ್ವನಾಮ | |
| | **ವಿಭಾಗ – 'ಸಿ'** **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 4 × 1 = 4 |
| 40. | ಪೂರ್ಣಿಮಾ ಮುದ್ದಿನಿಂದ ಸೊಂಪಾಗಿ ಬೆಳೆದು ಹುಣ್ಣಿಮೆ ಚಂದ್ರನ ಹಾಗೆ ಮೈಕೈ ತುಂಬಿಕೊಂಡಿದ್ದಳು. | |
| 41. | ಬಡತನದಿಂದ ವರದಕ್ಷಿಣೆ ಕೊಡಲಾರದೆ ಅವಳ ತಾಯಿ–ತಂದೆ ಅವಳನ್ನು ಇಪ್ಪತ್ತು ಜನರಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದರು. | |
| 42. | ಪ್ರತಿದಿನ ಪೂರ್ಣಿಮಾಳ ಪಾಲಿನ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. | |
| 43. | ಮುಂಜಾನೆಯಿಂದ ಸಂಜೆಯವರೆಗೂ ರೊಟ್ಟಿ ಬಡಿದು, ಬಡಿದು, ರಾತ್ರಿ ಮಲಗಿದಾಗಲೂ ಅವಳ ಕೈಗಳು ರೊಟ್ಟಿ ಬಡಿಯುವ ಕೆಲಸವನ್ನು ಮುಂದುವರಿಸುತ್ತಿದ್ದವು. ಇದರಿಂದ ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವೈಯಕ್ತಿಕ ಪತ್ರ : ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 46. | ಪ್ರಬಂಧ ಬರೆವಣಿಗೆ : | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |